ನಾವು ಪ್ರತಿಭಟನೆ ಮಾಡಿದ್ದೇವೆ. ಈ ಸದನದಲ್ಲಿ ಎಲ್ಲ ವಿಚಾರಗಳು ಚರ್ಚೆಯಾಗಬೇಕು, ಸದನ ಸುಸೂತ್ರವಾಗಿ ನಡೆಯಬೇಕು ಎನ್ನುವುದು ನಮ್ಮ ಉದ್ದೇಶವಾಗಿದೆ. ಇನ್ನೂ ಬಹಳಷ್ಟು ಮಹತ್ವದ ವಿಚಾರಗಳ ಬಗ್ಗೆ ನಾವು ಮಾತನಾಡಬೇಕಾಗಿದೆ. ಸದನ ನಡೆಯಬೇಕು ಎಂದು ತಾವೂ ಸಲಹೆ ಕೊಟ್ಟಿದ್ದೀರಿ. ತಮ್ಮ ಸಲಹೆಗೆ ನಾವು ಗೌರವ ಕೊಡುತ್ತೇವೆ. ಆದರೆ ಸರ್ಕಾರದ ಮೊಂಡುತನವೇನಿದೆ, ಈ ರೀತಿ ಒಬ್ಬರಿಗೆ ನಿರ್ಬಂಧ ಹಾಕಿರುವುದೇನಿದೆ, ಪ್ರಜಾತಂತ್ರದ ವಿರೋಧಿ ನಡೆ ಏನಿದೆ, ಅದನ್ನು ಖಂಡಿಸಿ ನಾವು ಸಭಾತ್ಯಾಗ ಮಾಡುತ್ತಿದ್ದೇವೆ.

(ಗೊಂದಲ)

(ಈ ಹಂತದಲ್ಲಿ ವಿರೋಧ ಪಕ್ಷವಾದ ಭಾರತೀಯ ಜನತಾ ಪಕ್ಷದ ಸದಸ್ಯರು ಸಭಾತ್ಯಾಗ ಮಾಡಿದರು)

(ಗೊಂದಲ)

ಅಧ್ಯಕ್ಷರು:– ಈಗ ಪ್ರಶ್ನೋತ್ತರ.

2. ಪ್ರಶ್ನೋತ್ತರ

ಅ. ಚುಕ್ಕೆ ಗುರುತಿನ ಪ್ರಶ್ನೆಗಳಿಗೆ ಸದನದಲ್ಲಿ ನೀಡಲಾದ ಉತ್ತರಗಳು

ಶ್ರೀ ವೈ.ಎಸ್.ವಿ. ದತ್ತಾ:– ಮಾನ್ಯ ಸಭಾಧ್ಯಕ್ಷರೆ, ಒಂದು ನಿಮಿಷ. ನಿನ್ನೆಯಿಂದ ನಾವೂ ನೋಡಿದ್ದೇವೆ. ಈ ಸದನವನ್ನು ನಮ್ಮ ರಾಜಕೀಯದ ಓಟ್ ಬ್ಯಾಂಕಿಗೋಸ್ಕರ ಬಳಸಿಕೊಳ್ಳುವ ವೇದಿಕೆಯೋ ಅಥವಾ ರಾಜ್ಯದ ಆರು ಕೋಟಿ ಜನರ ಸಮಸ್ಯೆಗೋಸ್ಕರ ಇರುವ ಸದನವೋ? ನಿನ್ನೆಯಿಂದ ನಮಗೆ ತುಂಬ ದುಃಖವಾಗಿದೆ. ಏಕೆಂದರೆ ರಾಜಕೀಯ ಪಕ್ಷಗಳು ಅವರ ತೆವಲಿಗೆ, ಅವರ ಲಾಭಗಳಿಗೆ ಈ ಸದನವನ್ನು ದುರುಪಯೋಗ ಮಾಡಿಕೊಳ್ಳುತ್ತಿರುವ ಬಗ್ಗೆ ನಮ್ಮ ಖಂಡನೆಯಿದೆ. ಇವತ್ತು ಇಲ್ಲಿ ರಾಜ್ಯದ ಆರು ಕೋಟಿ ಜನರ ಸಮಸ್ಯೆಗಳ ಬಗ್ಗೆ ಚರ್ಚೆಯಾಗಬೇಕು.